# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. 21/2019

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀ ಶಿವಕುಮಾರ್ | ಪ್ರಮಾಣ ಮಾಡಿಸಿದ ದಿನಾಂಕಃ | | |
| ತಂದೆ/ಗಂಡನ ಹೆಸರು | ಃ | ಶ್ರೀ ಶಿವಣ್ಣೇಗೌಡ | 25.09.2024 | | |
| ವಯಸ್ಸು | ಃ | 42 ವರ್ಷ | | | |
| ವೃತ್ತಿ | ಃ | ಗೆಸ್ಟ್ ಹೌಸ ಕೆಲಸ, ಮೈಸೂರು ಯುನಿವರ್ಸಿಟಿ | ಪ್ರಾ.ಸಾ. | ಃ | 14 |
| ವಾಸಸ್ಥಳ | ಃ | ವಿಜಯನಗರ | ಚಾ.ಸಾ. | ಃ | 22 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ಈ ಮೊದಲು ನಾನು ಗ್ರಾನೈಟ್ ವ್ಯವಹಾರ ಮಾಡುತ್ತಿದ್ದೆ ಆ ಕಾಲಕ್ಕೆ ನನಗೆ ಹಣದ ಅವಶ್ಯಕತೆ ಇದ್ದಾಗ ಸತೀಶ್ ಎನ್ನುವ ವ್ಯಕ್ತಿ ವೇದಾವತಿ ಎನ್ನುವವರನ್ನು ಪರಿಚಯ ಮಾಡಿಸಿದ್ದ ನಾನು ಅವರಿಂದ ಸಾಲ ಪಡೆಯುತ್ತಿದ್ದೆ. ನಾನು *2* ಬಾರಿ ವೇದಾವಾತಿಯವರಿಂದ ಸಾಲವಾಗಿ ಹಣ ಪಡೆದಿದ್ದೆ. ನನ್ನ ಸ್ನೇಹಿತ ಪ್ರಸಾದ್ ಭೈರಣ್ಣ ಎನ್ನುವವರಿಗೆ *2011* ರಲ್ಲಿ ಹಣದ ಅವಶ್ಯಕತೆ ಇದ್ದಾಗ ನಾನು ಮತ್ತು ಸತೀಶ ಸೇರಿ ಅವರನ್ನು ವೇದಾವತಿಯವರನ್ನು ಪರಿಚಯ ಮಾಡಿಸಿದ್ದೆವು. ಆ ಕಾಲಕ್ಕೆ ವೇದಾವತಿ ಇವರು ಪ್ರಸಾದ್ ಭೈರಣ್ಣ ಎನ್ನುವವರಿಗೆ *2* ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದರು. ಆ ಕಾಲಕ್ಕೆ ಮಾಸಿಕ ಶೇ.*10* ರಷ್ಟು ಬಡ್ಡಿ ಕೊಡುವ ಕುರಿತು ಒಪ್ಪಂದವಾಗಿತ್ತು. ಆ ಕಾಲಕ್ಕೆ ನಾನು ಮತ್ತು ಸತೀಶ ಆ ಪ್ರಸಾದ್ ಭೈರಣ್ಣ ಎನ್ನುವವರ ಸಾಲಕ್ಕೆ ಜಾಮೀನುದಾರರಾಗಿದ್ದೆವು. ಆದಾಗ *1* ತಿಂಗಳ ನಂತರ ಪ್ರಸಾದ್ ಭೈರಣ್ಣ *2* ಲಕ್ಷ *20*

ಸಾವಿರ ರೂಪಾಯಿಗಳನ್ನು ವೇದಾವತಿಯವರಿಗೆ ವಾಪಸ್ಸು ಕೊಟ್ಟಿದ್ದರು. ಆ ನಂತರ ಪ್ರಸಾದ್ ಭೈರಣ್ಣ ಇವರು ಪುನಃ 10 ಲಕ್ಷ ರೂಪಾಯಿ ಸಾಲವನ್ನು ವೇದಾವತಿಯವರಿಂದ ಕೇಳಿದ್ದರು. ಆ ಕಾಲಕ್ಕೆ ವೇದಾವತಿ ಇವರು ಜಮೀನು ಅಥವಾ ಮನೆಯ ಕುರಿತು ಕರಾರು ಮಾಡಿಕೊಟ್ಟರೇ ಸಾಲ ಕೊಡುತ್ತೇನೆ ಎಂದು ಹೇಳಿದ್ದರು. ನಾವು ಪ್ರಸಾದ್ ಭೈರಣ್ಣ ಇವರ ಹೆಂಡತಿ ಸವಿತಾ ಹತ್ತಿರ ಮಾತನಾಡಿ ಆ ಸವಿತಾ ಇವರಿಗೆ ಅವರ ತಂದೆ ದಾನವಾಗಿ ಕೊಟ್ಟ ಆಸ್ತಿಯ ಕುರಿತು ದಾನಪತ್ರವನ್ನು ತಂದು ವಕೀಲರಾದ ನಿಸಾರ್ ಅಹಮದ್ ಇವರ ಬಳಿ ಕರಾರು ಪತ್ರವನ್ನು ತಯಾರಿಸಿ ವೇದಾವತಿ ಇವರ ಮನೆ ಬಳಿ ಹೋದಾಗ ಅವರು ಸಂಜೆ ವರೆಗೆ ಕಾಯಿಸಿ 2 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಉಳಿದ 5 ಲಕ್ಷ ರೂಪಾಯಿಗಳನ್ನು ನೀವು ಬೇಕಾದಾಗ ಬನ್ನಿ ಕೊಡುತ್ತೇನೆ ಎಂದು ಹೇಳಿದ್ದರು. ಆ ಹಣಕ್ಕೆ ಗ್ಯಾರಂಟಿಯಾಗಿ ನನಗೆ ಸೇರಿದ 6 ಚೆಕ್ ಗಳು ಮತ್ತು ಎರಡು ಇ-ಸ್ಟ್ಯಾಂಪ್ ಗಳನ್ನು ಪಡೆದಿದ್ದರು. ಪ್ರಸಾದ್ ಭೈರಣ, ಸವಿತಾ ಮತ್ತು ಸತೀಶ್ ಇವರ ಬಳಿ ಸಹ ಚೆಕ್ ಮತ್ತು ಸ್ಟ್ಯಾಂಪ್ ಗಳನ್ನು ಪಡೆದಿದ್ದರು. ಆದಾಗ 2-3 ದಿನಗಳ ಬಳಿಕ ಪುನಃ ಹೋಗಿ ಹಣ ಕೇಳಿದಾಗ ಅವರು ಹಣ ಕೊಟ್ಟಿರಲಿಲ್ಲ. ಆ ದಿನ ನಾನು ಎಸ್.ಬಿ.ಐ ಖಾತೆ ಸೇರಿದ ಮೂರು ಚೆಕ್ ಮತ್ತು ಒ.ಬಿ.ಸಿ ಬ್ಯಾಂಕ್ ಗೆ ಸೇರಿದ 3 ಚೆಕ್ ಗಳನ್ನು ಕೊಟ್ಟಿದ್ದೆ.

2. ನಂತರ ಈಗ 12 ವರ್ಷಗಳ ಹಿಂದೆ ಒಂದು ದಿನ ನನ್ನನ್ನು ಪೋಲೀಸ್ ಠಾಣೆಗೆ ಕರೆದು ನಿಮ್ಮ 2 ಚೆಕ್ ವೇದಾವತಿ ಯವರ ಮನೆಯಲ್ಲಿ ಸಿಕ್ಕಿದೆ ಎಂದು ಹೇಳಿದ್ದರು ಮತ್ತು ಆ 2 ಚೆಕ್ ಗಳನ್ನು ನನಗೆ ತೋರಿಸಿದ್ದರು. ಈಗ ನಾನು ನೋಡುತ್ತಿರುವ ಎರಡು ಚೆಕ್ ಗಳು ಆ ದಿನ ಪೋಲೀಸ್ ಠಾಣೆಯಲ್ಲಿ ತೋರಿಸಿದ್ದ ನನಗೆ ಸೇರಿದ್ದ ಚೆಕ್ ಗಳು ಇವೆ. ಸದರಿ ಚೆಕ್ ಗಳನ್ನು ನಿ.ಪಿ-21, 22 ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ದಾಖಲೆ ಸವಿತಾ ಇವರು

ಮಾಡಿಕೊಟ್ಟಿದ್ದ ಕರಾರು ಪತ್ರ ಇದೆ. ಸದರಿ ದಾಖಲೆಯನ್ನು ನಿ.ಪಿ–*23* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ಸವಿತಾ ಇವರು ವೇದಾವತಿ ಇವರಿಗೆ ಕೊಟ್ಟಿದ್ದ ದಾನ ಪತ್ರ ಇದೆ. ಸದರಿ ದಾಖಲೆಯನ್ನು ನಿ.ಪಿ–*24* ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*3.* *2015* ರಲ್ಲಿ ಪೋಲೀಸರು ನನ್ನ ಎರಡು ಚೆಕ್ ಗಳನ್ನು ತೋರಿಸಿ ನನ್ನ ಹೇಳಿಕೆ ಪಡೆದುಕೊಂಡಿದ್ದರು ಎಂದರೆ ಇರಬಹುದು ನಿಖರವಾಗಿ ಗೊತ್ತಿಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಕೆ.ಎಸ್ ರವರಿಂದಃ-**

*4.* ನಾನು ವೇದಾವತಿಯವರಿಂದ ಸಾಲ ಪಡೆದ ಬಗ್ಗೆ ಯಾವುದೇ ದಾಖಲೆ ಇಲ್ಲ. ನಾನು ವೇದಾವತಿಯವರಿಂದ ಪಡೆದ ಸಾಲ ಪೂರ್ಣವಾಗಿ ಮರುಪಾವತಿ ಮಾಡಿದ್ದೆ ಈಗ ಅವರಿಗೆ ಕೊಡುವುದು ಯಾವುದು ಇಲ್ಲ. ವೇದಾವತಿಯವರು ನನಗೆ ಸಾಲ ಕೊಟ್ಟಿದ್ದಲ್ಲಿ ಆ ಬಗ್ಗೆ ದಾಖಲೆ ಇರುತ್ತಿತ್ತು ಎಂದರೆ ಸರಿಯಲ್ಲ. ನನಗೂ ವೇದಾವತಿಯವರಿಗೂ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ವೇದಾವತಿಯವರು ಮಾಸಿಕ ಶೇ.*10* ರಷ್ಟು ಬಡ್ಡಿ ಪಡೆಯುತ್ತಿದ್ದರು ಎಂದು ಪೋಲೀಸರ ಒತ್ತಡದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ–*23* ಕರಾರು ಪತ್ರದಲ್ಲಿ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ಪೋಲೀಸರ ಮುಂದೆ ನನ್ನ ಇಸ್ಟ್ಯಾಂಪ್ ಮತ್ತು *6* ಚೆಕ್ ಗಳನ್ನು ಪಡೆದ ಬಗ್ಗೆ ಹೇಳಿದ್ದೆ. ನಾನು ವೇದಾವತಿಯವರಿಗೆ

ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲವಾದ್ದರಿಂದ ಆ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರಸಾದ್ ಭೈರಣ್ಣ, ಅವರ ಹೆಂಡತಿ ಸವಿತಾ ಮಲ್ಲೇಶ್ ಮತ್ತು ಸತೀಶ್ ಇವರ ಪರಿಚಯ ನನಗೆ ಇದೆ ಎಂದರೆ ಸರಿಯಲ್ಲ. ವೇದಾವತಿ ಯವರು ನಿ.ಪಿ-*23* ರಂತೆ ಕರಾರು ಪತ್ರವನ್ನು ಆಸ್ತಿಯನ್ನು ಖರೀದಿ ಮಾಡುವ ಸಲುವಾಗಿ ಮಾಡಿಕೊಂಡು ನಿ.ಪಿ-*24* ದಾಖಲೆಯನ್ನು ಸಹ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಾನೇ ನನಗೆ ಪ್ರಸಾದ್ ಭೈರಣ್ಣ ಮತ್ತು ಸವಿತಾ ಮಲ್ಲೇಶ್ ಇವರು ಪರಿಚಯ ಇದ್ದ ಕಾರಣ ಅವರಿಂದ ನನ್ನ ಪರವಾಗಿ ವೇದಾವತಿಯವರ ಹೆಸರಿಗೆ ಕರಾರು ಪತ್ರ ಮಾಡಿಸಿದ್ದೆ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ನಾನು ಖರೀದಿ ಮಾಡುವ ಸಲುವಾಗಿ ವೇದಾವತಿಯವರಿಗೆ ಎರಡು ಚೆಕ್ ಗಳನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಕರಾರು ಪತ್ರದ ಕಾಲಕ್ಕೆ ನನ್ನ ಪರವಾಗಿ ವೇದಾವತಿಯವರು *2* ಲಕ್ಷ ರೂಪಾಯಿಗಳನ್ನು ಸವಿತಾ ಮಲ್ಲೇಶ್ ರವರಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಂತರ ನಾನು ಖರೀದಿ ಮಾಡುವ ಬಗ್ಗೆ ಸವಿತಾ ಮಲ್ಲೇಶ್ ಮತ್ತು ಪ್ರಸಾದ್ ಭೈರಣ್ಣ ಇವರಿಗೆ ಗೊತ್ತಾಗಿ ಅವರು ನನಗೆ ಆಸ್ತಿ ಮಾರಾಟ ಮಾಡಲು ನಿರಾಕರಿಸಿದ್ದರು ಎಂದರೆ ಸರಿಯಲ್ಲ. ಕರಾರು ಪತ್ರದ ಕಾಲಕ್ಕೆ ಪಡೆದ ಹಣವನ್ನು ವಾಪಸ್ಸು ಕೊಡುವ ಸಲುವಾಗಿ ಪ್ರಸಾದ್ ಭೈರಣ್ಣ ಇವರು ಚೆಕ್ ಗಳನ್ನು ಕೊಟಿದ್ದರು ಎಂದರೆ ಸರಿಯಲ್ಲ. ನಂತರ ನಾವು ಪರಸ್ಪರ ಮಾತುಕತೆ ಮಾಡಿ ಒಪ್ಪಂದ ಮಾಡಿಕೊಂಡು ಆ ಒಪ್ಪಂದದಂತೆ ಪ್ರಸಾದ್ ಭೈರಣ್ಣ ವೇದಾವತಿಯವರಿಗೆ *2* ಲಕ್ಷ ರೂಪಾಯಿಗಳನ್ನು ವಾಪಸ್ಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ನಂತರ ಪ್ರಸಾದ್ ಭೈರಣ್ಣ ಚೆಕ್ ಗಳನ್ನು ಬ್ಲಾಕ್ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನನ್ನ ಎರಡು ಚೆಕ್ ಗಳು ಮಾತ್ರ ವೇದಾವತಿಯವರ ಮನೆಯಲ್ಲಿ ದೊರೆತಿದೆ ಎಂದರೆ ಸರಿಯಲ್ಲ.

***5.*** ಪೋಲೀಸರು ನನ್ನನ್ನು ಸಹ ಆರೋಪಿಯನ್ನಾಗಿ ಮಾಡುವುದಾಗಿ ಹೆದರಿಸಿ ಸಾಕ್ಷಿದಾರನನ್ನಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸವಿತಾ ಮಲ್ಲೇಶ್, ಪ್ರಸಾದ್ ಭೈರಣ್ಣ ಮತ್ತು ಸತೀಶ್ ನನೊಂದಿಗೆ ಉತ್ತಮ ಸಂಬಂಧ ಹೊಂದಿಲ್ಲವಾದ ಕಾರಣ ಮತ್ತು ಅವರು ನನ್ನ ವಿರುದ್ಧ ಸಾಕ್ಷಿ ಹೇಳುತ್ತಾರೆ ಎನ್ನುವ ಕಾರಣಕ್ಕೆ ಅವರನ್ನು ಈ ಕೇಸಿನಲ್ಲಿ ಸಾಕ್ಷಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಭದ್ರತೆಗಾಗಿ ದಾಖಲೆ ಕೊಟ್ಟಿದ್ದರೆ ಉಳಿದ *4* ಚೆಕ್ ಮತ್ತು ಇ–ಸ್ಟ್ಯಾಂಪ್ ಪೇಪರ್ ದೊರೆಯುತ್ತಿತ್ತು ಭದ್ರತೆಗಾಗಿ ಕೊಟ್ಟಿಲ್ಲವಾದ್ದರಿಂದ ದೊರೆತಿಲ್ಲ ಎಂದರೆ ಸರಿಯಲ್ಲ. ನನ್ನೊಂದಿಗೆ ಕ್ರಯದ ವ್ಯವಹಾರ ಪೂರ್ಣಗೊಳಲಿಲ್ಲ ಎನ್ನುವ ಕಾರಣಕ್ಕೆ ಮತ್ತು ವೇದಾವತಿಯೇ ನಾನು ಕ್ರಯಕ್ಕೆ ಪಡೆಯುತ್ತೇನೆ ಎಂದು ಪ್ರಸಾದ್ ಭೈರಣ್ಣ ನಿಗೆ ತಿಳಿಸಿದ್ದಾರೆ ಎನ್ನುವ ಕಾರಣಕ್ಕೆ ವೇದಾವತಿಯವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರವನ್ನು ಮದ್ಯಾಹ್ನ ***3–3.30*** ಕ್ಕೆ ಮಾಡಿಸಿ ಸಂಜೆ ***5–5.30*** ಕ್ಕೆ ವೇದಾವತಿ ಇವರ ಮನೆ ಬಳಿ ಹೋಗಿದ್ದೆವು. ನಿ.ಪಿ–***23*** ಅನ್ನು ನಾನೇ ತಯಾರಿಸಿ ವೇದಾವತಿಯವರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಂತರ ವೇದಾವತಿಯವರ ಮನೆಯಲ್ಲಿ ಸವಿತಾ ಇವರಿಗೆ ಕ್ರಯ ಅಡ್ವಾನ್ಸ್ ಎಂದು *2* ಲಕ್ಷ ರೂಪಾಯಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ವೇದಾವತಿಯವರು ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ ಎಂದರೆ ನಿಜ. ಅವರು ಹೆಚ್.ಡಿ.ಕೋಟೆ ತಾಲೂಕಿನ ತಾರಕ ಗ್ರಾಮದಲ್ಲಿ ಕೆಲಸ ಮಾಡುತ್ತಾರೆ. ಅವರು ಕೆಲಸ ಮಾಡುವ ಕಾರಣ ನಿ.ಪಿ–***23*** ಕರಾರು ಪತ್ರ ಮಾಡಿಸಲು ಸಮಯ ಸಹ ಇರಲಿಲ್ಲ ಎಂದರೆ ಸರಿಯಲ್ಲ. ವೇದಾವತಿಯವರು ಸಾಲ ಕೊಡುವ ವ್ಯವಹಾರು ಮಾಡುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ–*21* ಮತ್ತು *22* ಚೆಕ್ ಗಳು ಸವಿತಾ ಮಲ್ಲೇಶ್ ಇವರಿಗೆ ಕೊಡಬೇಕಾದ ಉಳಿದ *5* ಲಕ್ಷ ಕ್ರಯದ ಹಣವನ್ನು ಪಾವತಿಸಲು ಕೊಟ್ಟ ಚೆಕ್ ಎಂದರೆ ಸರಿಯಲ್ಲ. ನಿಪಿ–***23*** ಕ್ಕೆ ಸತೀಶ್ ಇವರು

ಸಹಿ ಮಾಡಿಲ್ಲ. ನಿ.ಪಿ–*23* ಕ್ಕೆ ಸಹಿ ಮಾಡುವಾಗ ನಾನು ಹಾಜರಿರಲಿಲ್ಲವಾದ್ದರಿಂದ ಅದಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪವಿತ್ರಾ ಕುಮಾರಿ ಇವರ ಪರಿಚಯ ಇಲ್ಲ. ಪವಿತ್ರಾ ಕುಮಾರಿ ಮತ್ತು ವೇದಾವತಿ ಇವರ ನಡುವೆ ನಡೆದ ವ್ಯವಹಾರದ ಬಗ್ಗೆ ಗೊತ್ತಿಲ್ಲ.

**ಮರು ವಿಚಾರಣೆ:-** ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು